# ಬ್ರಹ್ಮಸೃಷ್ಟಿ

ಹೀಗೊಬ್ಬ ಜನಿಸಿದ. ಅವನಿಗೆ ಹುಟ್ಟನಿಂದಲೇ ಒಂದು ದೋಷವಿತ್ತು. ಹಸಿರು ಬಣ್ಣ ಅವನಿಗೆ ಕೆಂಪಾಗಿ ಕಾಣುತ್ತಿತ್ತು ಮತ್ತು ಕೆಂಪು ಬಣ್ಣ ಹಸಿರಾಗಿ ಕಾಣುತ್ತಿತ್ತು.

ಅದವನ ತಂದೆ-ತಾಯಿಗೆ ಗೊತ್ತಾಗಲಿಲ್ಲ. ಅವರು ಅವನಿಗೆ ಹಸಿರು ಬಣ್ಣವನ್ನು ತೋರಿಸಿ "ಹಸಿರು" ಎಂದರು. ಅವನಿಗೆ ಅದು ಕೆಂಪಾಗಿ ಕಾಣುತ್ತಿದ್ದರೂ "ಹಸಿರು" ಎಂದ. ಅವರು ಅವನಿಗೆ ಕೆಂಪು ಬಣ್ಣವನ್ನು ತೋರಿಸಿ "ಕೆಂಪು" ಎಂದರು. ಅವನಿಗೆ ಅದು ಹಸಿರಾಗಿ ಕಾಣುತ್ತಿದ್ದರೂ "ಕೆಂಪು" ಎಂದ.

ಅವನು ಶಾಲೆಗೆ ಹೋಗುವಷ್ಟು ದೊಡ್ಡವನಾದ. ರಸ್ತೆ ದಾಟುವಾಗ ಹಸಿರು ದೀಪ ಹತ್ತಿಕೊಂಡ ತಕ್ಷಣ ಅವನಿಗದು ಕೆಂಪಾಗಿ ಕಾಣುತ್ತಿತ್ತು. "ಹಸಿರು ದೀಪ ಮೂಡಿತು" ಎಂದು ಅವನು ರಸ್ತೆ ದಾಟುತ್ತಿದ್ದ.

ರಸ್ತೆಯ ಮೇಲೆ ಅಪಘಾತವಾಗಿ ಮಡಿದ ವ್ಯಕ್ತಿಯಿಂದ ಹರಿದ ಹಸಿರು ರಕ್ತ ಅವನಿಗೆ ಭಯ ಮೂಡಿಸುತ್ತಿತ್ತು. ಆಕಾಶದಲ್ಲಿ ಹಾರಾಡುವ ಕೆಂಪು ಗಿಳಿ ಅವನಿಗೆ ಖುಷಿ ಕೊಡುತ್ತಿತ್ತು.

ಅವನು ಯುವಕನಾದ. ರೈಲ್ವೇಗಾರ್ಡ್ ಆಗಿ ಉದ್ಯೋಗವಾಯ್ತು. ರೈಲು ನಿಲ್ಲುವದಕ್ಕೆ ಅವನು ಹಸಿರಾಗಿ ಕಾಣುತ್ತಿದ್ದ ಕೆಂಪು ಬಾವುಟವನ್ನು ತೋರಿಸುತ್ತಿದ್ದ. ರೈಲು ಹೊರಡುವದಕ್ಕೆ ಕೆಂಪಾಗಿ ಕಾಣುವ ಹಸಿರು ಬಾವುಟವನ್ನು ತೋರಿಸುತ್ತಿದ್ದ. ವೃತ್ತಿಯಲ್ಲಿ ಅವನೆಂದೂ ತಪ್ಪು ಮಾಡಲಿಲ್ಲ.

ಅವನಿಗೆ ಮಸೀದಿಯ ಮೇಲಿನ ಹಸಿರು ಧ್ವಜ ಕೆಂಪಾಗಿ ಕಾಣುತ್ತಿತ್ತು. ಮಂದಿರದ ಮೇಲಿನ ಕೆಂಪು ಧ್ವಜ ಹಸಿರಾಗಿ ಕಾಣುತ್ತಿತ್ತು.

ಅವನಿಗೆ ಮದುವೆಯಾಯ್ತು. ಮಕ್ಕಳಾದರು. ಮೊಮ್ಮಕ್ಕಳಾದರು. ಕಷ್ಟ-ಸುಖಗಳನ್ನು ಸಮಸಮವಾಗಿ ಅನುಭವಿಸಿ ಅವನು ಕಣ್ಣು ಮುಚ್ಚಿದ. ಜನರವನನ್ನು ಮಣ್ಣು ಮಾಡಿದರು.

ಸತ್ತ ಮೇಲೆಯೂ ಯಾರಿಗೂ ಅವನಿಗಿದ್ದ ದೋಷ ಗೊತ್ತಾಗಲಿಲ್ಲ. ಅವನಿಗೂ ತನಗಿದ್ದ ಆ ದೋಷ ಗೊತ್ತಾಗಲಿಲ್ಲ.

* * *

ಕತೆ ಕೇಳಿದಿರಲ್ಲ? ಈಗ ಹೇಳಿ. "ಅವನೇನಂತ ನಂಗೆ ಚೆನ್ನಾಗಿ ಗೊತ್ತು" ಎಂದು ಯಾರ ಬಗ್ಗೆಯಾದರೂ ಹೇಳುವ ಧೈರ್ಯ ನಿಮಗಿದೆಯೆ? ಅದು ಹೋಗಲಿ. "ನಾನೇನಂತ ನಂಗೆ ಚೆನ್ನಾಗಿ ಗೊತ್ತು" ಎಂದು ಹೇಳುವ ಧೈರ್ಯವಿದೆಯೆ?

-ವಸುಧೇಂದ್ರ